ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು–570 006.

ಸಂಖ್ಯೆ:ಕರಾಮುವಿ/ಅಸಾವಿ/07/–03/2018–19 ದಿನಾಂಕ:07–12–2018

ಗೆ,

........................................

........................................

........................................

........................................

ಮಾನ್ಯರೆ,

**ವಿಷಯ:**2016–1ನೇ ಸಾಲಿನ ವಾರ್ಷಿಕ ವರದಿ ಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡುವ ಸಂಬಂಧ ದರಪಟ್ಟಿ ಕೋರಿ.

**ಉಲ್ಲೇಖ:** ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 06–12–18 (ಕಂಡಿಕೆ 82)

*******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2016–17ನೇ ಸಾಲಿನ ವಾರ್ಷಿಕ ವರದಿ ಪುಸ್ರಕಗಳನ್ನು ಮುದ್ರಿಸಿ, ಸರಬರಾಜು ಮಾಡಿಕೊಳ್ಳಬೇಕಾಗಿದ್ದು, ಮುದ್ರಣವಾಗಬೇಕಾಗಿರುವ ಪುಸ್ತಕಗಳ ಪ್ರತಿಗಳು, ಒಳಪುಟಗಳನ್ನು ಮತ್ತು ರಕ್ಷಾಪುಟಗಳಿಗೆ ಬಳಸಬೇಕಾದ ಕಾಗದದ Specification ಈ ಕೆಳಕಂಡಂತೆ ತಿಳಿಸಲಾಗಿದೆ. ಸದರಿ ಪುಸ್ತಕಗಳನ್ನು ಮುದ್ರಿಸಿ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಯದ ಕೇಂದ್ರ ಕಚೇರಿಗೆ ಸರಬರಾಜು ಮಾಡಲು ತಗಲುವ ಕನಿಷ್ಠ ತಮ್ಮ ದರವನ್ನು (ಎಲ್ಲಾ ತೆರಿಗೆಗಳು ಸೇರಿದಂತೆ) ದರಪಟ್ಟಿ ನೀಡಲು ಕೋರಲಾಗಿದೆ.

**ಮುದ್ರಣವಾಗಬೇಕಾದ ಪುಸ್ತಕದ ವಿವರ:–**

1. ಮುದ್ರಣವಾಗಬೇಕಾಗಿರುವ 2016–17 ನೇ ವಾರ್ಷಿಕ ವರದಿಯ ಪುಸ್ತಕದ ಅಳತೆ, ಡೆಮಿ 1/4 ಆಗಿರುತ್ತದೆ.
2. ಒಟ್ಟು ಅಂದಾಜು 276 ಪುಟಗಳಿದ್ದು, ಇದರಲ್ಲಿ 265 ಒಳಪುಟಗಳಿಗೆ 60 ಜಿ.ಎಸ್.ಎಂ. ತೂಕದ ಬಿಳಿ ಕಾಗದ ಬಳಸಿ ಮುದ್ರಿಸಿ ಇನ್ನುಳಿದ 11 ಪುಟಗಳಲ್ಲಿ ಕಲರ್ ಫೋಟೋ ಬರುವುದರಿಂದ 90 ಜಿ.ಎಸ್.ಎಂ. ತೂಕದ ಆರ್ಟ್ ಪೇಪರ್ ಬಳಸಿ ಬಹುವರ್ಣದಲ್ಲಿ ಮುದ್ರಿಸಬೇಕಾಗುತ್ತದೆ.
3. ರಕ್ಷಾಪುಟಗಳಿಗೆ 220 ಜಿ.ಎಸ್.ಎಂ. ತೂಕದ ಇಂಡಿಯನ್ ಮ್ಯಾಟ್ ಆರ್ಟ್ ಕಾರ್ಡ್ ಬಳಸಿ ಬಹುವರ್ಣದಲ್ಲಿ ಮುದ್ರಿಸಿ. ಫರ್‌ಫೆಕ್ಟ್ ಬೈಂಡಿಂಗ್ ಮಾಡಬೇಕಾಗುತ್ತದೆ.
4. ಈ ಮೇಲ್ಕಂಡ Specification ರೀತ್ಯಾ 2016–17 ನೇ ಸಾಲಿನ ವಾರ್ಷಿಕ ವರದಿಯ ಪುಸ್ತಕ ರೂಪದಲ್ಲಿ 100 ಪತ್ರಿಗಳನ್ನು ಮುದ್ರಿಸಿ ಫರ್‌ಫೆಕ್ಟ್ ಬೈಡಿಂಗ್‌ನೊಂದಿಗೆ ಕೇಂದ್ರ ಸ್ಥಾನಕ್ಕೆ ಸರಬರಾಜು ಮಾಡಬೇಕಾಗುತ್ತದೆ. ಈ ರೀತಿಯಲ್ಲಿ ಒಟ್ಟಾರೆ 100 ಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಲು ತಮ್ಮ ಸಂಸ್ಥೆಯ ಕನಿಷ್ಠ ತಮ್ಮ ದರಗಳನ್ನು (ಎಲ್ಲಾ ತೆರಿಗೆಗಳು ಸೇರಿದಂತೆ) ತಿಳಿಸಲು ಕೋರಿದೆ.

**ನಿಯಮ ಮತ್ತು ಷರತ್ತುಗಳು :-**

1. ಮುದ್ರಣದ ವಿಷಯವುಳ್ಳ ಸಿ.ಡಿ ಮತ್ತು ಡೆಮಿಯನ್ನು ಮುದ್ರಣದ ಕಾರ್ಯಾದೇಶದೊಂದಿಗೆ ವಿ.ವಿ. ನಿಲಯವೇ ನೀಡುತ್ತದೆ. ಯಾವುದೇ ಬದಲಾವಣೆ ಇಲ್ಲದಂತೆ ಅಚ್ಚುಕಟ್ಟಾಗಿ ಮುದ್ರಿಸಿ ಫರಫೆಕ್ಟ್ ಬೈಡಿಂಗ್‌ನೊಂದಿಗೆ ಸರಬರಾಜು ಮಾಡಬೇಕಾಗುತ್ತದೆ.
2. ಸದರಿ ಪುಸ್ತಕಗಳನ್ನು ವಿ.ವಿ ನಿಲಯ ಸೂಚಿಸಿದ Specification ರೀತ್ಯಾ ಸಿದ್ಧಪಡಿಸಿ ನಿಗಧಿತ ದಿನಾಂಕದೊಳಗೆ ಸರಬರಾಜು ಮಾಡಲು ಸಿದ್ಧರಿರಬೇಕು.
3. ಈ ಪುಸ್ತಕದ ಮುದ್ರಣಕ್ಕೆ ನಿಗಧಿಪಡಿಸುವ ದರಗಳು ಇದೇ ವಿಷಯವಾಗಿ ಮತ್ತೊಮ್ಮೆ ದರಪಟ್ಟಿಯನ್ನು ಕರೆಯುವವರೆಗೆ ಅಥವಾ ಒಂದು ವರ್ಷ (365 ದಿನಗಳು) ಅವಧಿಗೆ ಚಾಲ್ತಿಯಲ್ಲಿರುತ್ತವೆ.
4. ಒಮ್ಮೆ ದರಪಟ್ಟಿ ಸಲ್ಲಿಸಿ ಕನಿಷ್ಠ ತಮ್ಮ ದರ ನಿಗಧಿಯಾದ ನಂತರ ಸಿದ್ದಪಡಿಸಲು ಸಬೂಬು ನೀಡಿದರೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳುತ್ತದೆ.
5. ಸದರಿ ದರಪಟ್ಟಿಯನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ವಿ.ವಿ.ಯು ಹೊಂದಿರುತ್ತದೆ.
6. ದರಪಟ್ಟಿಯನ್ನು ಮೊಹರಾದ ಲಕೋಟೆಯಲ್ಲಿಟ್ಟು **"2016-2017 ನೇ ಸಾಲಿನ ವಾರ್ಷಿಕ ವರದಿ ಪುಸ್ತಕದ ಮುದ್ರಣ ಸಂಬಂಧದ ದರಪಟ್ಟಿ"** ಎಂಬುದಾಗಿ ಶೀರ್ಷಿಕೆಯನ್ನು ಬರೆದು ದಿನಾಂಕ: 13-12-2018 ರ ಸಂಜೆ 4-00ರೊಳಗೆ ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,ಮುಕ್ತಗಂಗೋತ್ರಿ, ಮೈಸೂರು, ಇವರ ಹೆಸರಿಗೆ ಖುದ್ದಾಗಿ/ ಅಂಚೆ ಮೂಲಕ ಸಲ್ಲಿಸುವುದು.

ಆದೇಶದ ಮೇರೆಗೆ

7/12

ಕುಲಸಚಿವ

206 7/12/18

ಪ್ರತಿಗಳು:-

1. ಮಾನ್ಯ ಕುಲಪತಿಗಳ ವಿಶೇಷಾಧಿಕಾರಿಗಳು, ಕರಾಮುವಿ, ಮುಕ್ತಗಂಗೋತ್ರಿ
2. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮುಕ್ತಗಂಗೋತ್ರಿ
3. ಹಣಕಾಸು ಅಧಿಕಾರಿಗಳು, ಕರಾಮುವಿ, ಮುಕ್ತಗಂಗೋತ್ರಿ
4. ನಿರ್ದೇಶಕರು ಐ.ಟಿ ವಿಭಾಗ ವಿ.ವಿ ಅಂತರ್ಜಾಲದ ಪ್ರಕಟಿಸಲು ಮಾಹಿತಿಗಾಗಿ
5. ಕಚೇರಿ ಪ್ರತಿ.